ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1405

ಸದಸ್ಯರ ಹೆಸರು : ಶ್ರೀ ಬಿ.ಎಂ.ಎಲ್. ಕಾಂತ್‌ರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 23.09.2021

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಕಾವೇರಿ ನೀರಾವರಿ ನಿಗಮದಲ್ಲಿ ಎಸ್.ಸಿ.ಪಿ / ಟಿ.ಎಸ್.ಪಿ. ಯೋಜನೆಯಡಿ ವೈಯಕ್ತಿಕ ಫಲಾನುಭವಿ ಕಾಮಗಾರಿಯಡಿ ಖರ್ಚು ಮಾಡಲು ಎಷ್ಟು ಹಣವನ್ನು ನಿಗದಿಗೊಳಿಸಲಾಗಿದೆ; ಕ್ರಿಯಾ ಯೋಜನೆವೇನು; (ವಿವರವಾದ ಮಾಹಿತಿಯನ್ನು ನೀಡುವುದು)</td><td>ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ)ಯ ಅಡಿಯಲ್ಲಿನ ಕಾವೇರಿ ನೀರಾವರಿ ನಿಗಮದಡಿಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ 2020-21ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.</td></tr>
<tr><td>ಆ)</td><td>ಸದರಿ ಯೋಜನೆಯಡಿ ತುಮಕೂರು ಜಿಲ್ಲೆಗೆ ಎಷ್ಟು ಹಣ ನಿಗಧಿಪಡಿಸಿ ಬಿಡುಗಡೆಗೊಳಿಸಲಾಗಿದೆ; (ತಾಲ್ಲೂಕುವಾರು ವಿವರವಾದ ಮಾಹಿತಿಯನ್ನು ನೀಡುವುದು)</td><td>ಕಾವೇರಿ ನೀರಾವರಿ ನಿಗಮದಡಿಯಲ್ಲಿ ಬರುವ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ, 2020-21 ನೇ ಸಾಲಿಗೆ ಮುಂದುವರೆದ ಕಾಮಗಾರಿಗಳಿಗೆ ಎಸ್.ಸಿ.ಪಿ-ಟಿ.ಎಸ್.ಪಿ ಯೋಜನೆಯಡಿಯ ವೈಯಕ್ತಿಕ ಫಲಾನುಭವಿ ಕಾಮಗಾರಿಗಳಿಗೆ ನಿಗದಿಗೊಳಿಸಿದ ಹಾಗೂ ಬಿಡುಗಡೆಗೊಳಿಸಿದ ಅನುದಾನ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಯೋಜನೆ</th><th>ತಾಲ್ಲೂಕು</th><th>ವೈಯಕ್ತಿಕ ಕಾಮಗಾರಿ ಸಂಖ್ಯೆ</th><th>ನಿಗದಿ ಪಡಿಸಿದ ಅನುದಾನ</th><th>ಬಿಡುಗಡೆಗೊಳಿಸಿದ ಅನುದಾನ</th></tr>
<tr><td>1</td><td>ಎಸ್.ಸಿ.ಪಿ</td><td>ತುರುವೇಕೆರೆ</td><td>5</td><td>1.51</td><td>1.51</td></tr>
<tr><td colspan="3">ಒಟ್ಟು</td><td>5</td><td>1.51</td><td>1.51</td></tr>
<tr><td>3</td><td>ಟಿ.ಎಸ್.ಪಿ</td><td>ತುಮಕೂರು ಗ್ರಾಮಾಂತರ</td><td>2</td><td>2.43</td><td>2.43</td></tr>
<tr><td colspan="3">ಒಟ್ಟು</td><td>2</td><td>2.43</td><td>2.43</td></tr>
</table></td></tr>
<tr><td>ಇ)</td><td>ಡಬ್ಲ್ಯೂಆರ್.ಡಿ. 09 ಎಂ.ಬಿ.ಐ. 2019 (ಭಾಗ-12) ದಿನಾಂಕ:09.09.2020ರಲ್ಲಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ</td><td>ಸರ್ಕಾರದ ಪತ್ರ ಸಂಖ್ಯೆ: ಡಬ್ಲ್ಯೂಆರ್‌ಡಿ:09:ಎಂಬಿಐ:2019 (ಭಾಗ-12), ದಿನಾಂಕ:09.092020ರಲ್ಲಿ ಪ್ರಸ್ತಾಪಿಸಿರುವ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿಯಲ್ಲಿನ ಕಾಮಗಾರಿಗಳ ಕುರಿತಾಗಿ "ಅನುದಾನ ಲಭ್ಯತೆಗೆ ಅನುಗುಣವಾಗಿ ಕ್ರಿಯಾ</td></tr>
</table>

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
	ಎಸ್.ಸಿ.ಪಿ./ಟಿ.ಎಸ್.ಪಿ. ಕಾಮಗಾರಿಗಳನ್ನು ಸರ್ಕಾರವು ಅನುದಾನ ಲಭ್ಯತೆಗೆ ಅನುಗುಣವಾಗಿ ಕ್ರಿಯಾ ಯೋಜನೆಯಲ್ಲಿ ಸೇರಿಸಲು ನಿರ್ದೇಶನ ನೀಡಿರುವುದು ನಿಜವೇ;	ಯೋಜನೆಯಲ್ಲಿ ಸೇರಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು" ಹಾಗೂ ಸದರಿ ವಿಷಯವಾಗಿ ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ನಿರ್ದೇಶಿಸಲಾಗಿರುತ್ತದೆ. ಆದರೆ, 2020-21ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮದಡಿಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳದ ಕಾರಣ, ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಮುಂದುವರೆದು, ಎಸ್‌ಸಿಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರ ಹಾಗೂ ಲೋಕಸಭಾ ಕ್ಷೇತ್ರಗಳಿಗೆ ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದ್ದು, ಶಾಸಕರು/ಲೋಕಸಭಾ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿಗೆ ಗುಬ್ಬಿ ವಿಧಾನಸಭಾ ಕ್ಷೇತ್ರಕ್ಕೆ ಎಸ್.ಸಿ.ಪಿ ಯೋಜನೆಯಡಿ ರೂ.2.48 ಕೋಟಿ ಹಾಗೂ ಟಿ.ಎಸ್.ಪಿ ಯೋಜನೆಯಡಿ ರೂ.3.90 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಗುಬ್ಬಿ ಕ್ಷೇತ್ರದ ಶಾಸಕರು ಸೂಚಿಸಿರುವ ಕಾಮಗಾರಿಗಳ ಪಟ್ಟಿ ಪಡೆದು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದು, ಮಾನ್ಯ ವಿಧಾನ ಪರಿಷತ್ ಸದಸ್ಯರು ಸೂಚಿಸಿರುವ ರೂ.4.8 ಕೋಟಿ ಮೊತ್ತದ ಕಾಮಗಾರಿಗಳನ್ನು ಮುಂಬರುವ ಆರ್ಥಿಕ ವರ್ಷಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.
ಈ)	ಸರ್ಕಾರ ನಿರ್ದೇಶನ ನೀಡಿದರೂ ಇಲ್ಲಿಯವರೆಗೂ ಹೆಬ್ಬೂರು ಮತ್ತು ಗುಬ್ಬಿ ಅಭಿಯಂತರರ ಕಛೇರಿಗಳಿಂದ ಪ್ರಸ್ತಾವನೆಗಳು ಕೇಂದ್ರ ಕಛೇರಿಗೆ ತಲುಪದಿರಲು ಕಾರಣಗಳೇನು; ಇದರ ಸಂಬಂಧ ಸರ್ಕಾರದ ಕ್ರಮವೇನು;	
ಉ)	ಸದರಿ ಪ್ರಸ್ತಾವನೆಗೆ ಸರ್ಕಾರ ಯಾವಾಗ ಅನುಮೋದನೆ ನೀಡಿ ಹಣ ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಲು ಆದೇಶ ಹೊರಡಿಸಲಾಗುವುದು?	

ಜಸಂಇ 183 ಎಂಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು